WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಆಗಸ್ಟ್ ೨, ೨೦೧೨ (ಶ್ರಾವಣ ೧೧, ಶಕ ವರ್ಷ ೧೯೩೪)	ಸಂಚಿಕೆ ೩೧

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಕಾಇ 44 ಎಲ್ಎಸ್ಐ 2012, ಬೆಂಗಳೂರು, ದಿನಾಂಕ: 06–06–2012.

ಕರ್ನಾಟಕ ಲೋಕ ಸೇವಾ ಆಯೋಗವು ದಿನಾಂಕ:23–01–2012ರಂದು ಪ್ರಕಟಿಸಿರುವ ಅಧಿಸೂಚನೆ ಸಂಖ್ಯೆ:ಪಿಎಸ್‌ಸಿ 26 ಆರ್‌ಟಿಬಿ 2011ರ ಪಟ್ಟಿಯಲ್ಲಿ ಅಯ್ಕೆಯಾದ 95 ಅಭ್ಯರ್ಥಿಗಳ ಪೈಕಿ ಡಾ:ಚಂದನ ಎಂ.ಹೆಚ್. ಇವರನ್ನು ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ವಿಮಾ ವೈದ್ಯಾಧಿಕಾರಿ ಹುದ್ದೆಗೆ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆ, ದಾವಣಗೆರೆ (ನಿಟ್ಟುವಳ್ಳಿ) ಇಲ್ಲಿಗೆ ವೇತನ ಶ್ರೇಣಿ ₹. 28100–700–28800–800–33600–900–39000–1050–45300–1200–50100ಗಳಲ್ಲಿ ತಾತ್ಕಾಲಿಕವಾಗಿ ಈ ಕೆಳಗೆ ನಮೂದಿಸಿರುವ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ಈ ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಷರತ್ತುಗಳು:

1) ನೇಮಕಾತಿ ಹೊಂದಿದ ಅಭ್ಯರ್ಥಿಯು ಎರಡು ವರ್ಷಗಳ ಖಾಯಂಪೂರ್ವ ಸೇವಾವಧಿಯಲ್ಲಿ ನಿಗಧಿಪಡಿಸಲಾಗಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕದ್ದು.

2) ಅಭ್ಯರ್ಥಿಯು ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು ಇವರ ಮುಂದೆ ಈ ಅಧಿಸೂಚನೆಯು ನೋಂದಾಯಿತ ಅಂಚೆಯ ಮೂಲಕ ತಲುಪಿದ 15 ದಿನಗಳ ಒಳಗಾಗಿ ತಮ್ಮ ಸ್ವಂತ ಖರ್ಚು ವೆಚ್ಚದಲ್ಲಿ ಹಾಜರಾಗತಕ್ಕದ್ದು, ತಪ್ಪಿದಲ್ಲಿ, ನೇಮಕಾತಿ ಆದೇಶವನ್ನು ಯಾವುದೇ ಸೂಚನೆ ಇಲ್ಲದೆ ರದ್ದುಪಡಿಸಲಾಗುವುದು.

3) ಅಭ್ಯರ್ಥಿಯು ಎಲ್ಲಾ ಮೂಲ ದಾಖಲೆಗಳನ್ನು ಅಂದರೆ ವಿಮಾ ವೈದ್ಯಾಧಿಕಾರಿ ಹುದ್ದೆಗೆ ಗೊತ್ತುಪಡಿಸಿರುವ ವಿದ್ಯಾರ್ಹತೆಯ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ ಜನ್ಮ ದಿನಾಂಕದ ದಾಖಲೆ ಹಾಗೂ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ನಡವಳಿಕೆ ಪ್ರಮಾಣ ಪತ್ರ ಇತ್ಯಾದಿಗಳನ್ನು ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರ ಮುಂದೆ ಹಾಜರುಪಡಿಸತಕ್ಕದ್ದು.

4) ಇವರ ನೇಮಕಾತಿ ಮತ್ತು ಸೇವಾ ಷರತ್ತುಗಳು, ಜಾರಿಯಲ್ಲಿರುವ ನಿಯಮಗಳು ಮತ್ತು ಮುಂದೆ ಜಾರಿ ಮಾಡಲಿರುವ ಆದೇಶಗಳ ಪ್ರಕಾರ ಇರುತ್ತದೆ.

5) ಕರ್ನಾಟಕ ಲೋಕ ಸೇವಾ ಆಯೋಗವು ನೀಡಿರುವ ಆಯ್ಕೆಪಟ್ಟಿಯ ಜೇಷ್ಟತಾ ಪಟ್ಟಿಯ ಕ್ರಮ ಸಂಖ್ಯೆಯ ಆಧಾರದ ಮೇಲೆ ಜೇಷ್ಠತೆಯನ್ನು ಪರಿಗಣಿಸಲಾಗುವುದು.

6) ಅಭ್ಯರ್ಥಿಯು ಪ್ರಭಾರ ವರ್ಗಾವಣೆಯ ಪ್ರಮಾಣ ಪತ್ರಗಳನ್ನು ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು.

7) ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿದ್ದಲ್ಲಿ ಸ್ನಾತಕೋತ್ತರ ವ್ಯಾಸಂಗವನ್ನು ಮುಂದುವರಿಸಲು ಅನುಮತಿಯನ್ನು ನೀಡಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋವಿಂದಸ್ವಾಮಿ
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)

ಪಿ.ಆರ್. 109

ಆಯ್ಕೆ ಪ್ರಾಧಿಕಾರ ಹಾಗೂ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು, ಬೆಂಗಳೂರು

ಸಂ:ಡಿಪಿಎನ್:ಸಿಶಾ–2:196:2011–12

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಶೀಘ್ರಲಿಪಿಗಾರರ ಬ್ಯಾಕ್‌ಲಾಗ್ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ:– ಪರಿಶಿಷ್ಟ ಪಂಗಡ.

ಕ್ರ. ಸಂ.	ನೋಂದಣಿ ಸಂಖ್ಯೆ	ಅಭ್ಯರ್ಥಿಯ ಹೆಸರು	ವರ್ಗೀಕರಣ	ಜನ್ಮ ದಿನಾಂಕ	ಶೇಕಡಾವಾರು ಅಂಕಗಳು
01	**02**	**03**	**04**	**05**	**06**
1.	1	ಆನಂದ ಯಮನಪ್ಪ ತಳವಾರ	ಪರಿಶಿಷ್ಟ ಪಂಗಡ (ಗ್ರಾಮೀಣ ಅಭ್ಯರ್ಥಿ)	2.6.1982	58.05%

ಸ್ಥಳ: ಬೆಂಗಳೂರು
ದಿನಾಂಕ: 22–6–2012
ಪಿ.ಆರ್. 114

ಹೆಚ್.ಆರ್.ರೇಣುಕ
ಆಯ್ಕೆ ಪ್ರಾಧಿಕಾರ ಹಾಗೂ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು, ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–01.

ಅಧಿಸೂಚನೆ

ಸಂಖ್ಯೆ: ಇ(3) 1723 /2012–13/ಪಿಎಸ್‌ಸಿ, ದಿನಾಂಕ: 20–07–2012.

1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯಿತಿಗಳಲ್ಲಿನ 1750 ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳನ್ನು, ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಆಯ್ಕೆ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2006 ಹಾಗೂ ಅದರ ತಿದ್ದುಪಡಿಗಳನ್ವಯ ಭರ್ತಿಮಾಡಲು ON-LINE ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಈ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ತಾತ್ಕಾಲಿಕವಾಗಿ (Tentatively) ಡಿಸೆಂಬರ್ 2012ರಲ್ಲಿ ನಡೆಸಲು ಉದ್ದೇಶಿಸಿದೆ.

ಅರ್ಜಿಗಳನ್ನು ಆನ್–ಲೈನ್ (On-line) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

2. **ಪರೀಕ್ಷಾ ಶುಲ್ಕ:**

ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ	**₹ 300/–**
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ	**₹ 25/–**

1) ನಿಗದಿತ ಶುಲ್ಕವನ್ನು ಸಿಂಡಿಕೇಟ್ ಬ್ಯಾಂಕಿನ ಯಾವುದಾದರೂ ಶಾಖೆಗಳಲ್ಲಿ ಬ್ಯಾಂಕಿನ ವೇಳೆಯಲ್ಲಿ ಚಲನ್ ನೀಡಿ ಹಣ ಪಾವತಿಸಬಹುದು.

2) ಅಭ್ಯರ್ಥಿಗಳು ಯಾವುದೇ ತಪ್ಪು ಮಾಹಿತಿಯನ್ನು ನೀಡದೇ ಅರ್ಜಿ ಭರ್ತಿ ಮಾಡಲು On-Line ನಲ್ಲಿ ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು.

3) ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಆಯೋಗವು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.

3. **ಅಭ್ಯರ್ಥಿಗಳು ವಿದ್ಯುನ್ಮಾನ ಮಾರ್ಗ (On-line) ಮೂಲಕ ಅರ್ಜಿ ಸಲ್ಲಿಸುವ ಮತ್ತು ಶುಲ್ಕ ಸಂದಾಯ ಮಾಡುವ ವಿಧಾನಗಳು:–**

ಹಂತ 1:– ಅಭ್ಯರ್ಥಿಗಳು ಆಯೋಗದ ಅಧಿಕೃತ ವೈಬ್‌ಸೈಟ್ **"http://kpsc.kar.nic.in"**ನ್ನು ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಮೇಲೆ **'Application For Second Division Accounts Assistant'** ಎಂದು ಮೂಡುತ್ತದೆ ಮತ್ತು ಅಧಿಸೂಚನೆ ಹಾಗೂ ಅಭ್ಯರ್ಥಿಗಳಿಗೆ ಸೂಚನೆಗಳು/ಪರೀಕ್ಷಾ ಶುಲ್ಕ/ಬ್ಯಾಂಕಿನ ವಿವರಗಳು ಲಭ್ಯವಾಗಲಿದ್ದು, ಅಭ್ಯರ್ಥಿಗಳು ಅಧಿಸೂಚನೆಯಲ್ಲಿನ ವಿವರಗಳನ್ನು ಮತ್ತು ಅರ್ಜಿ ಸಲ್ಲಿಸುವ ಸೂಚನೆಗಳನ್ನು ತಪ್ಪದೇ ಓದಿಕೊಂಡು ಅದರಂತೆ ಅರ್ಜಿಯನ್ನು ಭರ್ತಿಮಾಡತಕ್ಕದ್ದು.

ಹಂತ 2:– ಅರ್ಜಿಯನ್ನು ಭರ್ತಿಮಾಡುವ ಮುನ್ನ ಅಭ್ಯರ್ಥಿಯು ತನ್ನ ಇತ್ತೀಚೆಗಿನ ಭಾವಚಿತ್ರವನ್ನು ಒಂದು ಸ್ವಚ್ಛವಾದ ಬಿಳಿಯ ಹಾಳೆಯ ಮೇಲೆ ಲಗತ್ತಿಸಿ ಅದರ ಕೆಳಗೆ ಕಪ್ಪು ಶಾಯಿಯ ಸ್ಕೆಚ್/ಮಾರ್ಕರ್ ಪೆನ್ನಿನಿಂದ ಸಹಿಯನ್ನು ಮಾಡಿ (ಯಾವುದೇ ಕಾರಣಕ್ಕೂ ಭಾವ ಚಿತ್ರದ ಮೇಲೆ ಸಹಿ ಮಾಡಬಾರದು) ನಂತರ ಭಾವಚಿತ್ರ **(Photo)** ಮತ್ತು ಸಹಿಯನ್ನು ಒಳಗೊಂಡಂತೆ ಈ ಕೆಳಗಿನ ಅಳತೆ ಪ್ರಕಾರ ಸ್ಕ್ಯಾನ್ ಮಾಡಿ ಇಟ್ಟುಕೊಂಡಿರತಕ್ಕದ್ದು.

o ಫೈಲ್ ಅಳತೆ<100 ಕೆಬಿ	**ಪಾಸ್ ಪೋರ್ಟ್ ಭಾವಚಿತ್ರದ ಅಳತೆಗಳು:**
o ಡಿಪಿಐ ಹಿನ್ನೆಲೆ=100 ಡಿಪಿಐ	45 ಎಂ.ಎಂ (ಉದ್ದ) X 35 ಎಂ.ಎಂ (ಅಗಲ)
o ಇಮೇಜ್ ಅಳತೆ=100%	
o ಕಲರ್	**ಸಹಿ ಅಳತೆ:**
o ಜೆಪಿಇಜಿ **(jpeg)**	20ಎಂ.ಎಂ (ಉದ್ದ) X 35 ಎಂ.ಎಂ (ಅಗಲ)

ಹಂತ 3:– **'Application For Second Division Accounts Assistant'** ಮೇಲೆ ಕ್ಲಿಕ್ ಮಾಡಿ ಅರ್ಜಿಯನ್ನು ಭರ್ತಿಮಾಡತಕ್ಕದ್ದು. ಅರ್ಜಿಯನ್ನು ಭರ್ತಿಮಾಡಿದ ನಂತರ ನಮೂದಿಸಿರುವ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಬೇಕು. ಅರ್ಜಿಯಲ್ಲಿ ನಮೂದಿಸಿರುವ ವಿವರಗಳಲ್ಲಿ ಏನಾದರೂ ತಪ್ಪುಗಳಾಗಿದ್ದಲ್ಲಿ ಅದನ್ನು ಸರಿಪಡಿಸಲು **Edit** ಮೇಲೆ ಕ್ಲಿಕ್ ಮಾಡಿ ನಂತರ ಅಗತ್ಯ ತಿದ್ದುಪಡಿಗಳನ್ನು ಮಾಡಬಹುದು.

ಹಂತ 4:– ಅರ್ಜಿಯಲ್ಲಿ ಭರ್ತಿ ಮಾಡಿರುವ ಎಲ್ಲಾ ವಿವರಗಳು ಸರಿಯಾಗಿರುತ್ತವೆಯೆಂದು ಮನದಟ್ಟು ಮಾಡಿಕೊಂಡು ನಂತರ ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಭಾವಚಿತ್ರ **(Photo)**ವನ್ನು **upload** ಮಾಡತಕ್ಕದ್ದು. **Photo upload** ಮಾಡಿದ ನಂತರ ಅರ್ಜಿಯಲ್ಲಿನ ವಿವರಗಳು ಸರಿಯಾಗಿರುತ್ತವೆಯೆಂದು ಒಪ್ಪಿರುತ್ತೇನೆ **(I agree)** ಎಂಬ ಘೋಷಣೆಯ ಮೇಲೆ ಕ್ಲಿಕ್ ಮಾಡತಕ್ಕದ್ದು, ಅನಂತರವೇ **Generate Challan** ಮತ್ತು **Application Preview** ಮೂಡಲಿದ್ದು, ಎರಡನ್ನೂ **Download** ಮಾಡಿ ಕೊಳ್ಳತಕ್ಕದ್ದು. ಮತ್ತು ಅರ್ಜಿಯ ಪ್ರತಿಯನ್ನು ಮತ್ತು ಶುಲ್ಕ ಸಂದಾಯ ಮಾಡಿದ ಚಲನ್‌ಅನ್ನು ಕಡ್ಡಾಯವಾಗಿ ಅಭ್ಯರ್ಥಿಗಳು ತಮ್ಮೊಂದಿಗೆ ಇಟ್ಟುಕೊಳ್ಳತಕ್ಕದ್ದು. ಆಯೋಗವು ಅಪೇಕ್ಷಿಸಿದಾಗ ಈ ಚಲನ್ ಅನ್ನು ಹಾಜರುಪಡಿಸಬೇಕು.

ಹಂತ 5:– **Download** ಮಾಡಿಕೊಳ್ಳಲಾದ **Challan** ನಲ್ಲಿರುವ ಶುಲ್ಕವನ್ನು ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಗಳಲ್ಲಿ ಚಲನ್ ನೀಡಿ ಹಣ ಸಂದಾಯ ಮಾಡಬಹುದಾಗಿರುತ್ತದೆ. ಶುಲ್ಕವನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಸಿಂಡಿಕೇಟ್ ಬ್ಯಾಂಕ್ ಅನ್ನು ಹೊರತುಪಡಿಸಿ ಇತರೆ ಯಾವುದೇ ಬ್ಯಾಂಕಿನಲ್ಲಿ ಶುಲ್ಕ ಸಂದಾಯ ಮಾಡುವಂತಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗುವುದು.

3.1 ಅಭ್ಯರ್ಥಿಗಳು ತಮ್ಮ ಅರ್ಜಿಯ ಸ್ಥಿತಿಯನ್ನು ತಿಳಿಯಬೇಕಾದಲ್ಲಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಐದು ದಿನಗಳ ತರುವಾಯು, ಆಯೋಗದ ವೆಬ್‌ಸೈಟ್‌ನ **Check Status** ಲಿಂಕಿನಲ್ಲಿ ಮಾಹಿತಿಗಳನ್ನು ದಾಖಲಿಸಿ, ಅರ್ಜಿಯು ಸಿಂಧುವಾಗಿರುವ ಬಗ್ಗೆ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

3.2 **ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ. ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.**

- ➡ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 26–07–2012.
- ➡ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25–08–2012.
- ➡ ಪರೀಕ್ಷಾ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 28–08–2012.

ವಿಶೇಷ ಸೂಚನೆ: **On-line ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) 9740977411 ಮತ್ತು 9741966115 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.**

4. **ಅರ್ಹತಾ ಷರತ್ತುಗಳು:**

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಆ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ವಿವಾಹವಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

ಇ) ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

5. **ಶೈಕ್ಷಣಿಕ ವಿದ್ಯಾರ್ಹತೆ:**

ಅ) ಪಿ.ಯು.ಸಿ. ಅಥವಾ 10 + 2 ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

ಆ) ಕಂಪ್ಯೂಟರ್ ಜ್ಞಾನವುಳ್ಳವರಾಗಿರಬೇಕು

ಸೂಚನೆ:– ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.

6. **ಹುದ್ದೆಗಳ ವರ್ಗೀಕರಣ:**

ಈ ಹುದ್ದೆಗಳ ವರ್ಗೀಕರಣದ ವಿವರವನ್ನು ಅನುಬಂಧ–01ರಲ್ಲಿ ತೋರಿಸಿದೆ.

ಅನುಬಂಧದಲ್ಲಿ ತೋರಿಸಿರುವ ವಿವಿಧ ಜಿಲ್ಲೆಗಳ ಗ್ರಾಮಪಂಚಾಯಿತಿಗಳಲ್ಲಿ ಖಾಲಿಯಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ, **ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣದಲ್ಲಿ ಬದಲಾವಣೆಯಾದಲ್ಲಿ ಅಂದರೆ ಕಡಿಮೆಯಾದಲ್ಲಿ ತಿದ್ದುಪಡಿ ಮತ್ತು ಹೆಚ್ಚಾದಲ್ಲಿ ಸೇರ್ಪಡೆ ಅಧಿಸೂಚನೆಯ ಮೂಲಕ ಪ್ರಕಟಿಸಲಾಗುವುದು. ಅಂತಿಮವಾಗಿ ಆಯ್ಕೆ ಹಂತಕ್ಕೆ ಬರುವ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನ ಸಮಯದಲ್ಲಿ ಅವರುಗಳು ಜಿಲ್ಲಾವಾರು ಆಯ್ಕೆಗೆ ಆದ್ಯತೆಯನ್ನು ನೀಡುವ ಸಲುವಾಗಿ ಹುದ್ದೆಗಳ ವರ್ಗೀಕರಣವನ್ನು ಒದಗಿಸಲಾಗುವುದು.**

7. **ವೇತನ ಶ್ರೇಣಿ :**

₹ 11600–200–12000–250–13000–300–14200–350–15600–400–17200–450–19000–500–21000

ಪಿಂಚಣಿ ಸೌಲಭ್ಯ: ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ:31.03.2006ರಂತೆ. ನೂತನ ಅಂಶದಾಯಿ ಪಿಂಚಣಿ ಸೌಲಭ್ಯ ಅನ್ವಯವಾಗುವುದು.

8. **ವಯೋಮಿತಿ:–** ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು

ಅ) ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು

ಆ) ಗರಿಷ್ಠ ವಯೋಮಿತಿ:

ಸಾಮಾನ್ಯ ವರ್ಗ	**35 ವರ್ಷ**
2ಎ,2ಬಿ,3ಎ,3ಬಿ	**38 ವರ್ಷ**
ಪ.ಜಾ/ಪ.ಪಂ/ಪ್ರ–1	**40 ವರ್ಷ**

ಅಭ್ಯರ್ಥಿಗಳ ಜನ್ಮ ದಿನಾಂಕವನ್ನು ಅವರ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) ಕ್ಯುಮುಲೇಟಿವ್ ರೆಕಾರ್ಡ್‌ನಲ್ಲಿ ನಮೂದಿಸಿರುವಂತೆ ಪರಿಗಣಿಸಲಾಗುವುದು. ಇವುಗಳನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

ಈ ಮುಂದಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಈ ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.

➢ ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ಅಥವಾ ಹಿಂದೆ ಹೊಂದಿದ್ದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಅವಳು ಎಷ್ಟು ವರ್ಷಗಳ ಅವಧಿಗೆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

➢ ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಈಗ ಹುದ್ದೆಯನ್ನು ಹೊಂದಿದ್ದರೆ ಅಥವಾ ಹಿಂದೆ ಹೊಂದಿದ್ದ ಪಕ್ಷದಲ್ಲಿ ಗರಿಷ್ಠ ವಯೋಮಿತಿಯನ್ನು ಅಭ್ಯರ್ಥಿಯು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದಾರೋ ಅಷ್ಟು ವರ್ಷಗಳ ಅಥವಾ ಐದು ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

➢ ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಸಶಸ್ತ್ರದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಆ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು.

ವಿವರಣೆ: 1) (ಎ) ಮಾಜಿ ಸೈನಿಕ ಎಂದರೆ ಸಶಸ್ತ್ರದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧರಲ್ಲದ ಹುದ್ದೆಗಳಲ್ಲಿ) ಸೇವೆ ಸಲ್ಲಿಸಿದ ವ್ಯಕ್ತಿ. ಆದರೆ ಡಿಫೆನ್ಸ್ ಸೆಕ್ಯುರಿಟಿಕೋರ್, ಜನರಲ್ ರಿಸರ್ವ್ ಇಂಜಿನೀಯರಿಂಗ್ ಫೋರ್ಸ್, ಲೋಕಸಹಾಯಕ ಸೇನಾ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ: ಮತ್ತು (ಬಿ) ಕೇಂದ್ರ ಸಶಸ್ತ್ರದಳಗಳಲ್ಲಿ ಸೇವೆ ಸಲ್ಲಿಸುವಾಗ ಹತರಾದ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

(ಅ) ಮೇಲ್ಕಂಡ ದಳದ ಸೇನೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

ಅಥವಾ

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಲ್ಲಿ ಬಿಡುಗಡೆಯಾದವನು

ಅಥವಾ

(ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇನೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

(ಈ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಅಭ್ಯರ್ಥಿಗಳು ಮಾಜಿ ಸೈನಿಕ ಮೀಸಲಾತಿಗೆ ಅರ್ಹರಿರುತ್ತಾರೆ.

1. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು
2. ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆಯಿಂದ ಬಿಡುಗಡೆಯಾದ ವ್ಯಕ್ತಿ.
3. ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು

ವಿವರಣೆ: 2) ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿರುವ ವ್ಯಕ್ತಿಗಳು ಸೇವೆಯಿಂದ ನಿವೃತ್ತಿಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ, ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವ ವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗಳಿಗೆ ನೇಮಕ ಹೊಂದುವಂತಿಲ್ಲ.

➢ ಅಭ್ಯರ್ಥಿಯು ನ್ಯಾಷನಲ್ ಕೆಡೆಟ್ ಕಾರ್ಪ್ಸ್‌ನಲ್ಲಿ ಪೂರ್ಣ ಕಾಲಿಕ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂತಹ ಕ್ಯಾಡೆಟ್ ಪರಿವೀಕ್ಷಕನಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು.

➢ ಅಭ್ಯರ್ಥಿಯು ರಾಜ್ಯ ಸರ್ಕಾರದಿಂದ ಪುರಸ್ಕೃತವಾದ ಗ್ರಾಮೀಣ ಔದ್ಯಮೀಕರಣ ಯೋಜನೆಯ ಮೇರೆಗೆ ನೇಮಕಗೊಂಡು ಗ್ರಾಮಸಮೂಹ ಪರಿಶೀಲಕರಾಗಿ ಈಗ ಕೆಲಸಮಾಡುತ್ತಿದ್ದರೆ, ಅಥವಾ ಹಿಂದೆ ಆ ಕೆಲಸದಲ್ಲಿದ್ದ ಪಕ್ಷದಲ್ಲಿ ಅಂತಹ ಗ್ರಾಮ ಸಮೂಹ ಪರಿಶೀಲಕರಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು

➢ ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು

➢ ಅಭ್ಯರ್ಥಿಯು ಜೀತಕಾರ್ಮಿಕನಾಗಿದ್ದ ಪಕ್ಷದಲ್ಲಿ 10 ವರ್ಷಗಳು ಜೀತ ಕಾರ್ಮಿಕನಾಗಿದ್ದ ಅಭ್ಯರ್ಥಿಯು ವಯೋಮಿತಿ ಸಡಿಲಿಕೆ ಪಡೆಯಲು ಸದರಿ ಅಧಿನಿಯಮ ಅಥವಾ 1957ರ ಕರ್ನಾಟಕ ಜೀತಕಾರ್ಮಿಕ ಪದ್ಧತಿ (ರದ್ದಿಯಾತಿ) ಆದೇಶದ ಮೇರೆಗೆ ಜೀತ ಸಾಲವನ್ನು ಸಂದಾಯ ಮಾಡುವ ಹೊಣೆಯಿಂದ ಬಿಡುಗಡೆಯಾಗಿದ್ದಾನೆಂದು ಪ್ರಮಾಣ ಪತ್ರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ರಿಂದ ಪಡೆದಿಟ್ಟುಕೊಂಡಿರತಕ್ಕದ್ದು.

➢ ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷಗಳು

9. ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ:

ಕಂಪ್ಯೂಟರ್ ಸಾಕ್ಷರತಾ ಅರ್ಹತಾ ಪರೀಕ್ಷೆಗೆ ಗರಿಷ್ಠ 30 ಅಂಕಗಳನ್ನು ನಿಗದಿಪಡಿಸಿದ್ದು, ಈ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ. 35 ಅಂದರೆ 11 ಅಂಕಗಳನ್ನು ಗಳಿಸತಕ್ಕದ್ದು. ಕಂಪ್ಯೂಟರ್ ಸಾಕ್ಷರತಾ ಅರ್ಹತಾ ಪರೀಕ್ಷೆಯಲ್ಲಿನ ಅರ್ಹತೆ ಹೊಂದಿದಲ್ಲಿ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಜೇಷ್ಠತೆ ಮತ್ತು ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಅನುಸಾರ ಆಯ್ಕೆ ಮಾಡಲಾಗುವುದು. ಕಂಪ್ಯೂಟರ್ ಸಾಕ್ಷರತಾ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ. 35 ಅಂಕಗಳನ್ನು ಪಡೆಯದ ಅಭ್ಯರ್ಥಿಗಳನ್ನು ಮುಂದಿನ ನೇಮಕಾತಿ ಪ್ರಕ್ರಿಯೆಗೆ ಪರಿಗಣಿಸಲಾಗುವುದಿಲ್ಲ. ಕಂಪ್ಯೂಟರ್ ಸಾಕ್ಷರತಾ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನು ಜೇಷ್ಠತಾ ಅಂಕಗಳಿಗೆ ಪರಿಗಣಿಸಲಾಗುವುದಿಲ್ಲ. ಪಠ್ಯಕ್ರಮವನ್ನು ಅನುಬಂಧ–02ರಲ್ಲಿ ತೋರಿಸಲಾಗಿದೆ)

9.1 ಕಡ್ಡಾಯ ಕನ್ನಡ ಪರೀಕ್ಷೆ: (ಪಠ್ಯಕ್ರಮವನ್ನು ಅನುಬಂಧ–03ರಲ್ಲಿ ನೋಡತಕ್ಕದ್ದು)ತಾಂತ್ರಿಕೇತರ ಹುದ್ದೆಗಳ ಸಂದರ್ಶನಕ್ಕೆ ಅರ್ಹರಾಗಲು ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಕನ್ನಡ ಪ್ರಥಮ ಭಾಷೆಯ ಮಟ್ಟದ 150 ಅಂಕಗಳಿಗೆ ಪರೀಕ್ಷೆ ನಡೆಸಲಿದ್ದು, ಅದರಲ್ಲಿ ಕನಿಷ್ಠ 50 ಅಂಕಗಳೊಂದಿಗೆ ಕಡ್ಡಾಯವಾಗಿ ತೇರ್ಗಡೆ ಹೊಂದಲೇಬೇಕು. ನಿಗದಿಪಡಿಸಿದ ಕನಿಷ್ಠ 50 ಅಂಕಗಳನ್ನು ಪಡೆಯದ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಾಗುವುದಿಲ್ಲ. ಕನ್ನಡ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಯ್ಕೆಗೆ ಪರಿಗಣಿಸುವುದಿಲ್ಲ, ಪರಂತು ಎಸ್.ಎಸ್.ಎಲ್.ಸಿ ಅಥವಾ ಅದಕ್ಕೆ ತತ್ಸಮಾನವೆಂದು ಘೋಷಿಸಲ್ಪಟ್ಟ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ.ಗಿಂತ ಮೇಲ್ಮಟ್ಟದ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಮುಖ್ಯ ಭಾಷೆ/ದ್ವಿತೀಯ ಭಾಷೆ ಅಥವಾ ಐಚ್ಛಿಕ ವಿಷಯವಾಗಿ (ಆದರೆ ಸಂಯುಕ್ತ ಪತ್ರಿಕೆಯ ವಿಷಯಗಳಲ್ಲೊಂದಾಗಿರಬಾರದು) ಅಥವಾ ಮೇಲಿನ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿದ್ದರೆ ಅಥವಾ ಲೋಕಸೇವಾ ಆಯೋಗದಿಂದ ಈ ಹಿಂದೆ ನಡೆಸಲ್ಪಟ್ಟ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ, ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಬಗ್ಗೆ ವಿನಾಯಿತಿ ನೀಡಲಾಗುವುದು.

ಕಡ್ಡಾಯ ಕನ್ನಡ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳ ಸಾಮಾನ್ಯ ಪತ್ರಿಕೆ ಮತ್ತು ನಿರ್ದಿಷ್ಟ ಪತ್ರಿಕೆಗಳನ್ನು ಮಾತ್ರ ಮೌಲ್ಯಮಾಪನ ಮಾಡಲಾಗುವುದು. ಕನ್ನಡ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಗಳಿಸದ ಅಭ್ಯರ್ಥಿಗಳ ಸಾಮಾನ್ಯ ಮತ್ತು ನಿರ್ದಿಷ್ಟ ಪತ್ರಿಕೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ

10. ಸ್ಪರ್ಧಾತ್ಮಕ ಪರೀಕ್ಷೆ:

ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ಹಾಗೂ ಅದರ ತಿದ್ದುಪಡಿಗಳನ್ವಯ ತಾಂತ್ರಿಕೇತರ ಹುದ್ದೆಗಳಾದ ಈ ಹುದ್ದೆಗಳಿಗೆ ಆಯೋಗವು ಸ್ಪರ್ಧಾತ್ಮಕ ಪರೀಕ್ಷೆಯನ್ನು ಕೆಳಕಂಡ ರೀತಿಯಲ್ಲಿ ನಡೆಸುತ್ತದೆ.

ಈ ಸ್ಪರ್ಧಾತ್ಮಕ ಪರೀಕ್ಷೆಯು ವಸ್ತು ನಿಷ್ಠ ಬಹು ಆಯ್ಕೆ (Objective Multiple Choice) ಮಾದರಿಯದಾಗಿದೆ. ತಲಾ 200 ಅಂಕಗಳ 02 ಪತ್ರಿಕೆಗಳಿರುತ್ತವೆ. ಅವು :

ಪತ್ರಿಕೆ–1–(ಸಾಮಾನ್ಯ ಪತ್ರಿಕೆ) (General Paper)-200 ಅಂಕಗಳು– 1 1/2 ಗಂಟೆ:

ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಲ್ಲಿ ಉತ್ತೀಣರಾದ ವ್ಯಕ್ತಿಯಿಂದ ನಿರೀಕ್ಷಿಸಬಹುದಾದ ಸಾಮಾನ್ಯ ಜ್ಞಾನದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಚಲಿತ ವಿದ್ಯಮಾನಗಳು, ಸಾಮಾನ್ಯ ವಿಜ್ಞಾನಗಳು, ಭಾರತದ ಇತಿಹಾಸ, ಭೂಗೋಳ, ಸಮಾಜ ವಿಜ್ಞಾನ ಮತ್ತು ದಿನನಿತ್ಯ ಗಮನಿಸಬಹುದಾದ ವಿಷಯಗಳು ಪ್ರಾಯೋಗಿಕ ಜ್ಞಾನ ಹಾಗೂ ಸಾಮಾನ್ಯ ಬೌದ್ಧಿಕ ಸಾಮರ್ಥ್ಯವನ್ನು ಒಳಗೊಂಡಿರುತ್ತದೆ.

ಪತ್ರಿಕೆ–2–(ನಿರ್ದಿಷ್ಟ ಪತ್ರಿಕೆ) (Specific Paper)–200 ಅಂಕಗಳು– 2 ಗಂಟೆ:

ಈ ಹುದ್ದೆಗಳ ಕಾರ್ಯ ಸ್ವರೂಪಕ್ಕೆ ಸಂಬಂಧಿಸಿದ ಪಠ್ಯಕ್ರಮವನ್ನು ಒಳಗೊಂಡಿರುತ್ತದೆ. (ಪಠ್ಯಕ್ರಮವನ್ನು ಅನುಬಂಧ–04ರಲ್ಲಿ ತೋರಿಸಲಾಗಿದೆ.)

ಸೂಚನೆ: ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಇರುತ್ತದೆ. ಕನ್ನಡ ಭಾಷೆಯಲ್ಲಿರುವ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಅಸ್ಪಷ್ಟತೆ ಇದ್ದಲ್ಲಿ ಅಭ್ಯರ್ಥಿಗಳು ಆಂಗ್ಲ ಭಾಷೆಯಲ್ಲಿರುವ ಪ್ರಶ್ನೆಗಳನ್ನು ನೋಡುವುದು.

ಟಿಪ್ಪಣಿ: – ಪ್ರಶ್ನೆ ಪತ್ರಿಕೆ ಬಗ್ಗೆ ಯಾವುದೇ ಬಗೆಯ ಆಕ್ಷೇಪಣೆ ಇದ್ದಲ್ಲಿ, ಪರೀಕ್ಷಾ ಕೇಂದ್ರವನ್ನು ಬಿಡುವ ಮೊದಲು ಪರೀಕ್ಷಾ ದಿನದಂದೇ ಸಂಬಂಧಿತ ಮೇಲ್ವಿಚಾರಕರ ಮುಖಾಂತರ ಅಭ್ಯರ್ಥಿಯ ಹೆಸರು, ವಿಳಾಸ, ನೋಂದಣಿ ಸಂಖ್ಯೆ ಇತ್ಯಾದಿಗಳನ್ನು ನಮೂದಿಸಿರುವ ಲಿಖಿತ ಮನವಿಯನ್ನು ಆಯೋಗಕ್ಕೆ ಸಲ್ಲಿಸಿ ಸ್ವೀಕೃತಿ (Acknowledgement) ಪಡೆಯಬೇಕು. ಪರೀಕ್ಷಾ ಕೇಂದ್ರ ಬಿಟ್ಟ ನಂತರ ಕಳುಹಿಸುವ ಯಾವುದೇ ಆಕ್ಷೇಪಣೆಯನ್ನು ಮಾನ್ಯ ಮಾಡಲಾಗುವುದಿಲ್ಲ.

10.1 ಸ್ಪರ್ಧಾತ್ಮಕ ಪರೀಕ್ಷೆಯನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಆಯೋಗವು ನಿಗದಿಪಡಿಸುವ ಇತರೆ ಯಾವುದೇ ಕೇಂದ್ರಗಳಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಅರ್ಜಿಯಲ್ಲಿ ಅವರು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಇಚ್ಚಿಸುವ ಕೇಂದ್ರವನ್ನು ನಮೂದಿಸತಕ್ಕದ್ದು. ಆದರೂ, ತಾಲ್ಲೂಕು ಕೇಂದ್ರಗಳಲ್ಲಿ ಪರೀಕ್ಷೆ ನಡೆಸುವ ಸನ್ನಿವೇಶ ಎದುರಾದಲ್ಲಿ ಅರ್ಜಿಯಲ್ಲಿ ಅಭ್ಯರ್ಥಿಗಳು ನೀಡಿರುವ ವಿಳಾಸವನ್ನಾಧರಿಸಿ ತಾಲ್ಲೂಕು ಕೇಂದ್ರಗಳಲ್ಲಿಯೂ ಸಹ ಪರೀಕ್ಷೆ ನಡೆಸಲಾಗುವುದು. ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸುವುದು ಆಯೋಗದ ಅಂತಿಮ ತೀರ್ಮಾನವಾಗಿರುತ್ತದೆ.

ಪರೀಕ್ಷೆಗಳ ದಿನಾಂಕವನ್ನು ಮುಂದೆ ಜಾಹೀರಾತು ಪಡಿಸಲಾಗುವುದು ಹಾಗೂ ಆಯೋಗದ ವೆಬ್ ಸೈಟ್ "http://kpsc.kar.nic.in" ನಲ್ಲಿ ಬಿತ್ತರಿಸಲಾಗುವುದು. ಪರೀಕ್ಷೆಗಳ ದಿನಾಂಕಗಳನ್ನು ಅಧಿಸೂಚಿಸಿದಾಗ ಪ್ರವೇಶ ಪತ್ರಗಳನ್ನು ಆಯೋಗದ ಅಂತರ್ಜಾಲದಿಂದ ಅಭ್ಯರ್ಥಿಗಳು ಡೌನ್ ಲೋಡ್ ಮಾಡಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಪ್ರತ್ಯೇಕವಾಗಿ ರವಾನಿಸಲಾಗುವುದಿಲ್ಲ.

11. ನೇಮಕಾತಿ ವಿಧಾನ:

ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಆಯ್ಕೆ ಮೂಲಕ ನೇರನೇಮಕಾತಿ) (ಸಾಮಾನ್ಯ) ನಿಯಮಗಳು 2006 ಮತ್ತು ಅದರ ತಿದ್ದುಪಡಿಗಳನ್ವಯ ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳ ಜೇಷ್ಠತೆ ಮತ್ತು ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ನಿಯಮಗಳನುಸಾರ ಇರುವ ಮೀಸಲಾತಿಯನ್ವಯ ಅಂತಿಮವಾಗಿ ಲಭ್ಯವಾಗುವ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಆಯ್ಕೆ ಪಟ್ಟಿ ತಯಾರಿಸಲಾಗುವುದು.

(ಅ) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸುವ ಒಟ್ಟು ಅಂಕಗಳ ಶೇಕಡಾವಾರು ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುವುದು.

(ಆ) ಈ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಇಬ್ಬರು ಅಥವಾ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕಗಳನ್ನು ಗಳಿಸಿದರೆ, ಅಂಕಗಳ ಅರ್ಹತಾ ಪಟ್ಟಿ ತಯಾರಿಸುವಾಗ ಅಂತಹ ಅಭ್ಯರ್ಥಿಗಳ ಅರ್ಹತೆಯನ್ನು ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಿ, ವಯಸ್ಸಿನಲ್ಲಿ ಹಿರಿಯರಾದವರನ್ನು ಅರ್ಹತಾ ಪಟ್ಟಿಯಲ್ಲಿ ಜೇಷ್ಠತಾನುಕ್ರಮದಲ್ಲಿ ಪರಿಗಣಿಸಲಾಗುವುದು.

(ಇ) ಮೀಸಲಾತಿ ನಿಯಮಾನುಸಾರ 'ಅ' ಪಟ್ಟಿಯಲ್ಲಿನ ಅಭ್ಯರ್ಥಿಗಳ ಪೈಕಿ 1:3ರ ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

(ಈ) ಸ್ಪರ್ಧಾತ್ಮಕ ಪರೀಕ್ಷೆಗೆ ನಿಗದಿಪಡಿಸಿದ ಒಟ್ಟು ಅಂಕಗಳ ಶೇಕಡ 12.5ರಷ್ಟು (ಅಂದರೆ 50) ಅಂಕಗಳು ಸಂದರ್ಶನಕ್ಕೆ ಗರಿಷ್ಠ ಅಂಕಗಳಾಗಿರುತ್ತದೆ.

ಸಂದರ್ಶನ:– ಸಂದರ್ಶನಕ್ಕೆ ಅರ್ಹರಾಗುವ ಅಭ್ಯರ್ಥಿಗಳ ಸಂದರ್ಶನವನ್ನು ಆಯೋಗವು ನಡೆಸಿ ಸಂದರ್ಶನದಲ್ಲಿ ಅವರು ವ್ಯಕ್ತಪಡಿಸುವ ಸಾಮರ್ಥ್ಯತೆಯ ಅನುಸಾರ ನೀಡುವ ಅಂಕಗಳನ್ನು ಸಂದರ್ಶನ ನಡೆದ ದಿನ ಅಥವಾ ಮುಂದಿನ ದಿನದಂದು ಕಛೇರಿಯ ಪ್ರಕಟಣಾ ಫಲಕದಲ್ಲಿ ಮತ್ತು ಆಯೋಗದ ವೆಬ್‌ಸೈಟ್‌ನಲ್ಲಿ (ಅಂತರ್ಜಾಲದಲ್ಲಿ) ಪ್ರಕಟಿಸಲಾಗುವುದು.

12. ಪ್ರಮುಖ ಸೂಚನೆಗಳು:

12.1. ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:

ಜಾತಿ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು

➡ ಪ.ಜಾ/ಪ.ಪಂ. ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ

➡ ಪ್ರವರ್ಗ–1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಹಾಗೂ

➡ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ಸಂಬಂಧಿತ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು. ಈ ಪ್ರಮಾಣ ಪತ್ರವನ್ನು ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರಬೇಕು.

ಹಿಂದುಳಿದ ವರ್ಗಗಳಾದ ಪ್ರ–2ಎ, ಪ್ರ–2ಬಿ, ಪ್ರ–3ಎ ಮತ್ತು ಪ್ರ–3ಬಿ ವರ್ಗದ ಮೀಸಲಾತಿ ಪ್ರಮಾಣ ಪತ್ರಗಳನ್ನು ಅಭ್ಯರ್ಥಿಗಳು ಪಡೆದ ದಿನಾಂಕದಿಂದ ಅರ್ಜಿಗಳನ್ನು ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದೊಳಗೆ 05 ವರ್ಷಗಳ ಅವಧಿಯಲ್ಲಿರಬೇಕು. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ. ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ಅರ್ಜಿಯ ನಿಗದಿತ ಸ್ಥಳದಲ್ಲಿ ತಪ್ಪದೇ ನಮೂದಿಸಬೇಕು ಹಾಗೂ ಸಂದರ್ಶನಕ್ಕೆ ಅರ್ಹರಾಗಿ ಹಾಜರಾದಾಗ ಅದರ ಮೂಲ ಮೀಸಲಾತಿ ಪ್ರಮಾಣ ಪತ್ರವನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು.

12.2. ಗ್ರಾಮೀಣ ಅಭ್ಯರ್ಥಿ:

➡ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.

ಈ ಪ್ರಮಾಣ ಪತ್ರಗಳು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಿಂಧುವಾಗಿರಬೇಕು ಮತ್ತು ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

➡ ಗ್ರಾಮೀಣ ಮೀಸಲಾತಿಯನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ನಮೂನೆ 2 ರಲ್ಲಿ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ಪಡೆದಿಟ್ಟು ಕೊಂಡಿರತಕ್ಕದ್ದು.

➡ ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ–2ರ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ನಮೂನೆ–1 ರಲ್ಲಿ ಅವರು ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಶೀಲ್ದಾರ್ ರವರಿಂದ ಪಡೆದಿರತಕ್ಕದ್ದು.

➡ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಸಹ ಅನರ್ಹರಾಗುತ್ತಾರೆ.

ಸೂಚನೆ: ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ನಮೂನೆ–2ರ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಅದಕ್ಕೆ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಪಡೆದಿರತಕ್ಕದ್ದು.

12.3. ಕನ್ನಡ ಮಾಧ್ಯಮ ಅಭ್ಯರ್ಥಿ:

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧ ಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದಿರಬೇಕು.

12.4. ಅಂಗವಿಕಲ ಅಭ್ಯರ್ಥಿ:

ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 50 ಎಸ್‌ಆರ್‌ಆರ್ 2000, ದಿನಾಂಕ: 03.09.2005 ಮತ್ತು ದಿನಾಂಕ: 01–08–2009ರಲ್ಲಿ ದೃಷ್ಟಿ ಮಾಂದ್ಯ, ಶ್ರವಣ ದೋಷವುಳ್ಳ, ಚಲನವಲನ ವೈಕಲ್ಯ, ಕುಷ್ಠರೋಗದಿಂದ ಗುಣಮುಖರಾದ ಮತ್ತು ಬುದ್ಧಿ ಮಾಂದ್ಯಂತೆ/ಮಾನಸಿಕ ಅಸ್ವಸ್ಥತೆ (Low vision, Hearing impairment, locomotor disability Leprosy cured, Mental retardation & Mental illness) ವೈಕಲ್ಯತೆಯೆಂದು ಪರಿಗಣಿಸಿದ್ದು, ಶೇ.40ಕ್ಕೆ ಕಡಿಮೆ ಇಲ್ಲದಂತೆ ಬಳಲುತ್ತಿರುವ ವ್ಯಕ್ತಿಗಳು.

ಅಂಗವಿಕಲರಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು ವೈದ್ಯಕೀಯ ಪ್ರಮಾಣ ಪತ್ರವನ್ನು ದಿನಾಂಕ: 19.11.2005ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 115 ಸೆನೆನಿ 2005ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ, ಅಂಗವಿಕಲತೆಯ ಬಗ್ಗೆ ಜಿಲ್ಲಾಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ.

12.5 ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 74 ಸೆನೆನಿ 2006, ದಿನಾಂಕ: 30–10–2007ರ ಪ್ರಕಾರ ದೃಷ್ಟಿ ಮಾಂದ್ಯ ಅಭ್ಯರ್ಥಿಗಳಿಗೆ ಆಯೋಗವು ವೈದ್ಯಕೀಯ ಮಂಡಳಿಯ ಮುಂದೆ ತಪಾಸಣೆ ನಡೆಸಿ, ವೈದ್ಯಕೀಯ ವರದಿಯ ಆಧಾರದ ಮೇರೆಗೆ ಪರೀಕ್ಷೆಯನ್ನು ಬರೆಯಲು ಲಿಪಿಕಾರರನ್ನು ಮತ್ತು ಪರೀಕ್ಷೆಯಲ್ಲಿ 01 ಗಂಟೆಗೆ 10 ನಿಮಿಷಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲಾಗುವುದು.

ಅ) ವೈದ್ಯಕೀಯ ಪರೀಕ್ಷೆಗೆ ಒಳಪಟ್ಟ ಅಭ್ಯರ್ಥಿಗಳಲ್ಲಿ ಯಾವುದೇ ಅಭ್ಯರ್ಥಿಯು ದೃಷ್ಟಿ ಮಾಂಧ್ಯ ಮೀಸಲಾತಿಯಡಿ ಅನರ್ಹರೆಂದು ವೈದ್ಯಕೀಯ ಸಮಿತಿಯು ದೃಢೀಕರಿಸಿದಲ್ಲಿ ಅಂತಹ ಅಭ್ಯರ್ಥಿಗಳ ದೃಷ್ಟಿ ಮಾಂದ್ಯ ಮೀಸಲಾತಿಯನ್ನು ತಿರಸ್ಕರಿಸಲಾಗುವುದು.

ಆ) ಲಿಪಿಕಕಾರರ ಶೈಕ್ಷಣಿಕ ವಿದ್ಯಾರ್ಹತೆಯು ಆಯ್ಕೆಪರೀಕ್ಷೆಗೆ ನಿಗದಿಪಡಿಸಿದ ವಿದ್ಯಾರ್ಹತೆಗಿಂತ ಹೆಚ್ಚಾಗಿರಬಾರದು.

ಇ) ದೃಷ್ಟಿ ಮಾಂದ್ಯ ಅಭ್ಯರ್ಥಿಯು ಸ್ವತಃ ಕರೆತರುವ ಲಿಪಿಕಾರರ ದುರ್ನಡತೆಗೆ ಅಭ್ಯರ್ಥಿಯೇ ಜವಾಬ್ದಾರನಾಗಿರುತ್ತಾರೆ.

ಈ) ಲಿಪಿಕಕಾರರ ಮತ್ತು ಅಭ್ಯರ್ಥಿಯ ನಡುವೆ ನಡೆಯುವ ಸಂವಾದವು ಪರೀಕ್ಷಾ ಕೊಠಡಿಯಲ್ಲಿನ ಶಾಂತಿಗೆ ಭಂಗ ತರಬಾರದು. ಅಥವಾ ಅದೇ ಕೊಠಡಿಯಲ್ಲಿರುವ ಇತರೆ ಅಭ್ಯರ್ಥಿಗಳಿಗೆ ತೊಂದರೆಯುಂಟು ಮಾಡುವಂತಿರಬಾರದು. ಮತ್ತು ವೈದ್ಯಕೀಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗೆ ಯಾವುದೇ ಪ್ರಯಾಣ ಭತ್ಯೆ/ ದಿನಭತ್ಯೆ ನೀಡಲಾಗುವುದಿಲ್ಲ. ಹಾಗೂ ದೃಷ್ಟಿ ಮಾಂಧ್ಯ ಅಭ್ಯರ್ಥಿ ಮತ್ತು ಲಿಪಿಕಾರರು ಅನುಬಂಧ–05ರಲ್ಲಿರುವಂತೆ ದೃಢೀಕರಣ ಪತ್ರ ಸಲ್ಲಿಸಬೇಕು.

ಈ ಅಂಗವಿಕಲ ಮೀಸಲಾತಿಯಡಿ ಆಯ್ಕೆ ಹೊಂದುವ ಅಭ್ಯರ್ಥಿಗಳು ಸಹ ಈ ನ್ಯೂನ್ಯತೆಯನ್ನು ಹೊಂದಿದ್ದರೂ ಸದರಿ ಹುದ್ದೆಯ ಕರ್ತವ್ಯ ನಿರ್ವಹಣೆಗೆ ಅಡ್ಡಿ ಉಂಟಾಗದೆಂದು ತಿಳಿಸುವ ದೈಹಿಕ ಅರ್ಹತೆಯ ಪ್ರಮಾಣ ಪತ್ರವನ್ನು ಕರ್ತವ್ಯಕ್ಕೆ ಸೇರುವ ಮುನ್ನ ನೀಡಬೇಕಾಗುತ್ತದೆ.

12.5 ಯೋಜನಾ ನಿರಾಶ್ರಿತ ಅಭ್ಯರ್ಥಿ:

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 23 ಸೆನೆನಿ 99, ದಿನಾಂಕ: 23–11–2000ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸತಿತರಾದ ಕುಟುಂಬದ ಅಭ್ಯರ್ಥಿಗಳು ಈ ಮೀಸಲಾತಿಗೆ ಅನ್ವಯವಾಗುವುದಿಲ್ಲ) ಈ ಮೀಸಲಾತಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್ ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಪಡೆದಿರಬೇಕು.

ಸೂಚನೆ: 1) ಈ ಮೇಲಿನ ಎಲ್ಲಾ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು.

2) ಈ ಮೇಲೆ ನಮೂದಿಸಿರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ.

13. **ಅಭ್ಯರ್ಥಿಗಳು ON-LINE ಅರ್ಜಿ ಸಲ್ಲಿಸುವುದರಿಂದ ಯಾವುದೇ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸಲು ಅವಕಾಶ ಇರುವುದಿಲ್ಲ. ಆದರೆ ಈ ಕೆಳಕಂಡ ಪ್ರಮಾಣ ಪತ್ರಗಳನ್ನು/ದಾಖಲಾತಿಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅಂದರೆ, ದಿನಾಂಕ: 25–08–2012ರ ಒಳಗೆ ಪಡೆದಿರಬೇಕು ಇಲ್ಲವೇ ಸಿಂಧುವಾಗಿರಬೇಕು, ಹಾಗೂ ಆಯೋಗವು ಪರಿಶೀಲನೆಗಾಗಿ ಹಾಜರುಪಡಿಸಲು ಸೂಚಿಸಿದಾಗ ಅರ್ಜಿಯಲ್ಲಿ ನಮೂದಿಸಿರುವ ಮೀಸಲಾತಿಯ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುವುದು.**

1) **ಕಡ್ಡಾಯವಾಗಿ ಹಾಜರು ಪಡಿಸಬೇಕಾದ ವಿದ್ಯಾರ್ಹತೆ/ ಜನ್ಮ ದಿನಾಂಕ ಪ್ರಮಾಣ ಪತ್ರಗಳನ್ನು ಹಾಜರು ಪಡಿಸದಿದ್ದಲ್ಲಿ : ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.**

2) **ವಿವಿಧ ಮೀಸಲಾತಿ ಕೋರಿ ಹಾಜರು ಪಡಿಸಬೇಕಾದ ಪ್ರಮಾಣ ಪತ್ರಗಳನ್ನು ಹಾಜರು ಪಡಿಸದಿದ್ದಲ್ಲಿ: ಆ ಮೀಸಲಾತಿಯನ್ನು ರದ್ದು ಪಡಿಸಿ ಸಾಮಾನ್ಯ ಅರ್ಹತೆಯಲ್ಲಿ ಅರ್ಹತೆಯನ್ನು ಹೊಂದಿದ್ದಲ್ಲಿ ಮಾತ್ರ, ಸಾಮಾನ್ಯ ಅರ್ಹತೆಯ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು.**

13.1 ಕಡ್ಡಾಯವಾಗಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳು:

1. ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಾದ ಪಿ.ಯು.ಸಿ. ಅಥವಾ 10+2 ವಿದ್ಯಾರ್ಹತೆಯ ಅಂಕಪಟ್ಟಿಗಳು.
2. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆಯ ಪ್ರಮಾಣ ಪತ್ರ (ಟಿ.ಸಿ)/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತಭಾಗ (Extract of Cumulative Record)
3. ವಿವಿಧ ಮೀಸಲಾತಿಗಳನ್ನು ಕೋರಿದ್ದಲ್ಲಿ, ಮೀಸಲಾತಿ ಪ್ರಮಾಣ ಪತ್ರಗಳು.

13.2 ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಕೋರಿದ್ದಲ್ಲಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳು:

1. ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿಹೊಂದಿದ ಬಗೆಗಿನ ಪ್ರಮಾಣ ಪತ್ರ

ಟಿಪ್ಪಣಿ: ಮಾಜಿ ಸೈನಿಕ ಅವಲಂಬಿತರ ಈ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಯಮಾನುಸಾರ ಅ ಮೀಸಲಾತಿಗೆ ಅರ್ಹರೆ? ಎಂಬುದನ್ನು ಹತ್ತಿರದ ಜಿಲ್ಲಾ ಸೈನಿಕ ಬೋರ್ಡ್‌ನಿಂದ ತಿಳಿದುಕೊಂಡು ಮೀಸಲಾತಿಯನ್ನು ಕೋರುವುದು ಸೂಕ್ತ.

2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಪ್ರವರ್ಗ–3ಬಿ ಮೀಸಲಾತಿ ಅಭ್ಯರ್ಥಿಗಳು ನಮೂನೆ ಡಿ/ಇ/ಎಫ್ ನಲ್ಲಿ ತಹಶೀಲ್ದಾರ್‌ರವರಿಂದ ಪಡೆದಿರುವ ಪ್ರಮಾಣ ಪತ್ರ.
3. ಸೇವೆಯಲ್ಲಿರುವ ಅಭ್ಯರ್ಥಿಗಳು ಅವರು ಸೇವೆಯಲ್ಲಿರುವ ಬಗ್ಗೆ ಅರ್ಜಿಯಲ್ಲಿನ ನಿಗದಿತ ಅಂಕಣವನ್ನು (Circle) ತುಂಬತಕ್ಕದ್ದು ಹಾಗೂ ಅವರ ಸೇವಾ ಪ್ರಮಾಣ ಪತ್ರ ಮತ್ತು ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ನಿರಪೇಕ್ಷಣಾ ಪ್ರಮಾಣ ಪತ್ರವನ್ನು ('No Objection' Certificate) ಸಂಬಂಧಿತ ನೇಮಕಾತಿ ಪ್ರಾಧಿಕಾರದಿಂದ ದಿನಾಂಕ: 25–08–2012ರ ಒಳಗೆ ಪಡೆದಿಟ್ಟುಕೊಂಡಿರಬೇಕು ಮತ್ತು ಆಯೋಗವು ಸೂಚಿಸಿದಾಗ ಹಾಜರುಪಡಿಸತಕ್ಕದ್ದು.
4. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2 ರಲ್ಲಿ
5. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ
6. ಅಂಗವಿಕಲ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ಪಡೆದ ವೈದ್ಯಕೀಯ ಪ್ರಮಾಣ ಪತ್ರ.
7. ಯೋಜನಾ ನಿರಾಶ್ರಿತ ಅಭ್ಯರ್ಥಿಗಳು, ವಿಧವೆಯರು, ಜೀತ ಕಾರ್ಮಿಕರು, ಗ್ರಾಮ ಸಮೂಹ ಪರಿಶೀಲಕರು ಮತ್ತು ಕ್ಯಾಡೆಟ್ ಪರಿವೀಕ್ಷಕರು ಇವರುಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣಪತ್ರ.

ಈ ಮೇಲಿನ ವಿದ್ಯಾರ್ಹತೆ, ಮೀಸಲಾತಿ ಮತ್ತು ವಯೋಮಿತಿ ಇನ್ನಿತರ ಅಂಶಗಳನ್ನು ಆಯೋಗವು ಕೂಲಂಕಷವಾಗಿ ಪರಿಶೀಲಿಸಿದ ನಂತರವೇ ಅಭ್ಯರ್ಥಿಗಳನ್ನು ಜೇಷ್ಠತೆ ಮತ್ತು ಮೀಸಲಾತಿ ಆಧಾರದ ಮೇಲೆ ಮುಂದಿನ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದು.

14. ಪ್ರಮುಖ ಸೂಚನೆಗಳು:

1. ಅಭ್ಯರ್ಥಿಗಳು ON-LINE ಅರ್ಜಿಗಳಲ್ಲಿ ನೀಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆಯಲು ಅರ್ಹರೆ ಎಂಬುದನ್ನು ಆಯೋಗವು ಪರಿಶೀಲಿಸಿ ಮೇಲು ನೋಟಕ್ಕೆ ಅರ್ಹರೆಂದು ಕಂಡುಬಂದ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ನೀಡುತ್ತದೆ. ಆದ್ದರಿಂದ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಮೀಸಲಾತಿ ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

2. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಮೀಸಲಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ, ಪರೀಕ್ಷಾ ಕೇಂದ್ರ ಹಾಗೂ ವಯೋಮಿತಿ ಸಡಿಲಿಕೆ, ಇತ್ಯಾದಿ ವಿವರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು ಹಾಗೂ ಈ ಬಗ್ಗೆ ಆನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆ ಪತ್ರಗಳನ್ನು ಪುರಸ್ಕರಿಸಲಾಗುವುದಿಲ್ಲ.

3. ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ವಿಳಾಸ ಬದಲಾವಣೆಯಾಗಿದ್ದಲ್ಲಿ ಅಭ್ಯರ್ಥಿಗಳು ಲಿಖಿತ ಮೂಲಕ ಆಯೋಗದ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಆಯೋಗವು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ಆಯೋಗವು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರವಹಿಸತಕ್ಕದ್ದು.

15. ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು:

ಸಾ.ಅ	ಸಾಮಾನ್ಯ ಅರ್ಹತೆ	GM	General Merit
ಪ.ಜಾ	ಪರಿಶಿಷ್ಟ ಜಾತಿ	SC	Scheduled Caste
ಪ.ಪಂ	ಪರಿಶಿಷ್ಟ ಪಂಗಡ	ST	Scheduled Tribe
ಪ್ರ–1	ಪ್ರವರ್ಗ–1	Cat – 1	Category – I
2ಎ	ಪ್ರವರ್ಗ–2ಎ	2A	Category – 2A
2ಬಿ	ಪ್ರವರ್ಗ–2ಬಿ	2B	Category – 2B
3ಎ	ಪ್ರವರ್ಗ–3ಎ	3A	Category – 3A
3ಬಿ	ಪ್ರವರ್ಗ–3ಬಿ	3B	Category – 3B
ಮಾ.ಸೈ	ಮಾಜಿ ಸೈನಿಕ	Ex-MP	Ex-Military Person
ಗ್ರಾಮೀಣ	ಗ್ರಾಮೀಣ ಅಭ್ಯರ್ಥಿ	Rural	Rural Candidate
ಕ.ಮಾ.ಅ	ಕನ್ನಡ ಮಾಧ್ಯಮ ಅಭ್ಯರ್ಥಿ	KMS	Kannada Medium Student
ಯೋ.ಅ	ಯೋಜನಾ ನಿರಾಶ್ರಿತ ಅಭ್ಯರ್ಥಿ	PDP	Project Displaced Person
ಅಂ.ವಿ.	ಅಂಗವಿಕಲ	PH	Physically Handicapped Person

16. ಪ್ರವೇಶ ಪತ್ರ:

ಆಯೋಗವು ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಕಳುಹಿಸುವುದಿಲ್ಲ. ಅಭ್ಯರ್ಥಿಗಳು ಸ್ವತಃ ಆಯೋಗದ ವೆಬ್‌ಸೈಟಿನಿಂದ ಪ್ರವೇಶ ಪತ್ರಗಳನ್ನು DownLoad ಮಾಡಿಕೊಂಡು ಪರೀಕ್ಷೆಗೆ ಹಾಜರಾಗತಕ್ಕದ್ದು. ಪ್ರವೇಶ ಪತ್ರಗಳನ್ನು DownLoad ಮಾಡಿಕೊಳ್ಳುವ ಅಂಶವನ್ನು ಪರೀಕ್ಷಾ ದಿನಾಂಕಕ್ಕೆ 15 ದಿನಗಳ ಮುಂಚಿತವಾಗಿ ಪ್ರಕಟಿಸಲಾಗುವುದು.

17. ಆಯೋಗದೊಡನೆ ಪತ್ರ ವ್ಯವಹಾರ:

ಆಯೋಗವು ಅಭ್ಯರ್ಥಿತ್ವದ ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದಾಗ್ಯೂ ಪರೀಕ್ಷೆಗಾಗಿ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವಲ್ಲಿ ಸಮಸ್ಯೆ ಉಂಟಾದಲ್ಲಿ, ಸಹಾಯವಾಣಿ (HELP LINE) ಸಂಪರ್ಕಿಸತಕ್ಕದ್ದು. ಅಭ್ಯರ್ಥಿಯು ಮಾಹಿತಿಗಾಗಿ ಸಂಪರ್ಕಿಸುವ ಸಮಯದಲ್ಲಿ ಈ ಹುದ್ದೆಗಳಿಗೆ ಸಲ್ಲಿಸಿದ ಅರ್ಜಿಯ ಕ್ರಮಸಂಖ್ಯೆ, ಜನ್ಮ ದಿನಾಂಕ, ಕೋರಿದ ಪರೀಕ್ಷಾ ಕೇಂದ್ರ ಇತ್ಯಾದಿ ವಿವರಗಳನ್ನು ನೀಡತಕ್ಕದ್ದು.

18. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:

ಕೇಂದ್ರ ಕಛೇರಿಯ ಮಾಹಿತಿ ಕೇಂದ್ರ	:	**080-30574901**
	:	**080-30574957**
ಪ್ರಾಂತೀಯ ಕಛೇರಿ ಮೈಸೂರು	:	**0821-2545956**
ಪ್ರಾಂತೀಯ ಕಛೇರಿ ಬೆಳಗಾವಿ	:	**0831-2475345**
ಪ್ರಾಂತೀಯ ಕಛೇರಿ ಗುಲ್ಬರ್ಗಾ	:	**08472-227944**

ಪ್ರಾಂತೀಯ ಕಛೇರಿ ಶಿವಮೊಗ್ಗ	:	**08182-228099**
ಸಹಾಯವಾಣಿ (Help Line)	:	**9740977411**
	:	**9741966115**

19. ದುರ್ನಡತೆ :

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಹೊಂದಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂಬ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದಲ್ಲಿ ಹಾಗೂ ಆಯೋಗದಿಂದ ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಆಯೋಗವು ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

ವಿ.ಬಿ. ಪಾಟೀಲ್

ಕಾರ್ಯದರ್ಶಿ,

ಕರ್ನಾಟಕ ಲೋಕಸೇವಾ ಆಯೋಗ.

ಅನುಬಂಧ – 1

ಹುದ್ದೆಗಳ ವರ್ಗೀಕರಣ

ಬೆಂಗಳೂರು ನಗರ ಜಿಲ್ಲೆ ಹುದ್ದೆಗಳ ಸಂಖ್ಯೆ : 34

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	1	2	2	*1	–	–	–	6
ಪ.ಪಂ.	1	–	–	–	–	–	–	1
ಪ್ರ–1	1	1	–	–	–	–	–	2
ಪ್ರ–2(ಎ)	1	2	1	*1	–	–	–	5
ಪ್ರ–2(ಬಿ)	1	–	–	–	–	–	–	1
ಪ್ರ–3(ಎ)	1	–	–	–	–	–	–	1
ಪ್ರ–3(ಬಿ)	1	–	–	–	–	–	–	1
ಸಾ.ಅ.	3	5	5	*1	1	1	1	17
ಒಟ್ಟು	10	10	8	3	1	1	1	34

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹುದ್ದೆಗಳ ಸಂಖ್ಯೆ : 36

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	1	2	2	*1	–	–	–	6
ಪ.ಪಂ.	1	–	–	–	–	–	–	1
ಪ್ರ–1	1	1	–	–	–	–	–	2
ಪ್ರ–2(ಎ)	1	2	1	*1	–	–	–	5
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	–	–	–	–	–	–	1
ಪ್ರ–3(ಬಿ)	1	–	–	–	–	–	–	1
ಸಾ.ಅ.	3	6	5	*1	1	1	1	18
ಒಟ್ಟು	10	12	8	3	1	1	1	36

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಬಾಗಲಕೋಟೆ ಜಿಲ್ಲೆಹುದ್ದೆಗಳ ಸಂಖ್ಯೆ : 49

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	3	2	*1	–	–	–	8
ಪ.ಪಂ.	1	1	–	–	–	–	–	2
ಪ್ರ–1	1	1	–	–	–	–	–	2
ಪ್ರ–2(ಎ)	2	2	2	*1	–	–	–	7
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	5	7	6	*2	2	1	1	24
ಒಟ್ಟು	14	17	10	4	2	1	1	49

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಬೆಳಗಾಂ ಜಿಲ್ಲೆ ಹುದ್ದೆಗಳ ಸಂಖ್ಯೆ : 145

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	5	7	5	*1	2	1	1	22
ಪ.ಪಂ.	1	2	1	*1	–	–	–	5
ಪ್ರ–1	1	2	2	*1	–	–	–	6
ಪ್ರ–2(ಎ)	5	7	5	*1	2	1	1	22
ಪ್ರ–2(ಬಿ)	1	2	2	*1	–	–	–	6
ಪ್ರ–3(ಎ)	1	2	1	*1	–	–	–	5
ಪ್ರ–3(ಬಿ)	2	2	2	*1	–	–	–	7
ಸಾ.ಅ.	15	22	18	*2, **1, ***1	7	3	3	72
ಒಟ್ಟು	31	46	36	11	11	5	5	145

* ದೃಷ್ಟಿಮಾಂದ್ಯತೆಯುಳ್ಳವರಿಗೆ, ** ಶ್ರವಣ ದೋಷವುಳ್ಳವರಿಗೆ ಮತ್ತು *** ಚಲನವಲನ ವೈಕಲ್ಯ ಇರುವವರಿಗೆ ಮೀಸಲಿರಿಸಿದೆ.

ಬಳ್ಳಾರಿ ಜಿಲ್ಲೆ ಹುದ್ದೆಗಳ ಸಂಖ್ಯೆ : 56

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	3	3	*1	–	–	–	9
ಪ.ಪಂ.	1	1	–	–	–	–	–	2
ಪ್ರ–1	1	1	–	–	–	–	–	2
ಪ್ರ–2(ಎ)	2	3	3	*1	–	–	–	9
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	6	9	7	*2	2	1	1	28
ಒಟ್ಟು	15	20	13	4	2	1	1	56

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಬೀದರ್ ಜಿಲ್ಲೆ ಹುದ್ದೆಗಳ ಸಂಖ್ಯೆ : 48

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	2	2	*1	–	–	–	7
ಪ.ಪಂ.	1	1	–	–	–	–	–	2
ಪ್ರ–1	1	1	–	–	–	–	–	2
ಪ್ರ–2(ಎ)	2	2	2	*1	–	–	–	7
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	5	7	6	*2	2	1	1	24
ಒಟ್ಟು	14	16	10	4	2	1	1	48

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಬಿಜಾಪುರ ಜಿಲ್ಲೆ ಹುದ್ದೆಗಳ ಸಂಖ್ಯೆ : 71

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	3	3	3	*1	1	–	–	11
ಪ.ಪಂ.	1	1	1	–	–	–	–	3
ಪ್ರ–1	1	1	1	–	–	–	–	3
ಪ್ರ–2(ಎ)	3	3	3	*1	1	–	–	11
ಪ್ರ–2(ಬಿ)	1	1	1	–	–	–	–	3
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	1	–	–	–	–	3
ಸಾ.ಅ.	7	11	9	*2	3	2	1	35
ಒಟ್ಟು	18	22	19	4	5	2	1	71

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಚಿಕ್ಕಮಗಳೂರು ಜಿಲ್ಲೆ ಹುದ್ದೆಗಳ ಸಂಖ್ಯೆ : 63

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	3	3	*1	1	–	–	10
ಪ.ಪಂ.	1	1	–	–	–	–	–	2
ಪ್ರ–1	1	1	1	–	–	–	–	3
ಪ್ರ–2(ಎ)	2	3	3	*1	1	–	–	10
ಪ್ರ–2(ಬಿ)	1	1	1	–	–	–	–	3
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	7	9	8	*2	3	1	1	31
ಒಟ್ಟು	16	20	16	4	5	1	1	63

* ದೃಷ್ಟಿಮಾಂದ್ಯವುಳ್ಳವರಿಗೆ ಮೀಸಲಿರಿಸಿದೆ.

ಚಿತ್ರದುರ್ಗ ಜಿಲ್ಲೆ ಹುದ್ದೆಗಳ ಸಂಖ್ಯೆ : 70

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	3	3	3	*1	1	–	–	11
ಪ.ಪಂ.	1	1	–	–	–	–	–	2
ಪ್ರ–1	1	1	1	–	–	–	–	3
ಪ್ರ–2(ಎ)	3	3	3	*1	1	–	–	11
ಪ್ರ–2(ಬಿ)	1	1	1	–	–	–	–	3
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	1	–	–	–	–	3
ಸಾ.ಅ.	7	11	9	*2	3	2	1	35
ಒಟ್ಟು	18	22	18	4	5	2	1	70

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಚಾಮರಾಜನಗರ ಜಿಲ್ಲೆಹುದ್ದೆಗಳ ಸಂಖ್ಯೆ : 48

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	2	2	*1	–	–	–	7
ಪ.ಪಂ.	1	1	–	–	–	–	–	2
ಪ್ರ–1	1	1	–	–	–	–	–	2
ಪ್ರ–2(ಎ)	2	2	2	*1	–	–	–	7
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	5	7	6	*2	2	1	1	24
ಒಟ್ಟು	14	16	10	4	2	1	1	48

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ದಕ್ಷಿಣ ಕನ್ನಡಹುದ್ದೆಗಳ ಸಂಖ್ಯೆ : 59

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	3	3	*1	1	–	–	10
ಪ.ಪಂ.	1	1	–	–	–	–	–	2
ಪ್ರ–1	1	1	1	–	–	–	–	3
ಪ್ರ–2(ಎ)	2	3	3	*1	–	–	–	9
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	6	9	8	*2	2	1	1	29
ಒಟ್ಟು	15	20	15	4	3	1	1	59

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ದಾವಣಗೆರೆ ಜಿಲ್ಲೆ ಹುದ್ದೆಗಳ ಸಂಖ್ಯೆ : 49

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	3	2	*1	–	–	–	8
ಪ.ಪಂ.	1	1	–	–	–	–	–	2
ಪ್ರ–1	1	1	–	–	–	–	–	2
ಪ್ರ–2(ಎ)	2	2	2	*1	–	–	–	7
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	5	7	6	*2	2	1	1	24
ಒಟ್ಟು	14	17	10	4	2	1	1	49

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಧಾರವಾಡ ಜಿಲ್ಲೆ ಹುದ್ದೆಗಳ ಸಂಖ್ಯೆ : 27

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	1	2	1	*1	–	–	–	5
ಪ.ಪಂ.	1	–	–	–	–	–	–	1
ಪ್ರ–1	1	–	–	–	–	–	–	1
ಪ್ರ–2(ಎ)	1	1	1	*1	–	–	–	4
ಪ್ರ–2(ಬಿ)	1	–	–	–	–	–	–	1
ಪ್ರ–3(ಎ)	1	–	–	–	–	–	–	1
ಪ್ರ–3(ಬಿ)	1	–	–	–	–	–	–	1
ಸಾ.ಅ.	3	4	4	*1	1	–	–	13
ಒಟ್ಟು	10	7	6	3	1	–	–	27

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಗದಗ ಜಿಲ್ಲೆ ಹುದ್ದೆಗಳ ಸಂಖ್ಯೆ : 33

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	1	2	2	*1	–	–	–	6
ಪ.ಪಂ.	1	–	–	–	–	–	–	1
ಪ್ರ–1	1	1	–	–	–	–	–	2
ಪ್ರ–2(ಎ)	1	2	1	*1	–	–	–	5
ಪ್ರ–2(ಬಿ)	1	–	–	–	–	–	–	1
ಪ್ರ–3(ಎ)	1	–	–	–	–	–	–	1
ಪ್ರ–3(ಬಿ)	1	–	–	–	–	–	–	1
ಸಾ.ಅ.	3	5	5	*1	1	1	–	16
ಒಟ್ಟು	10	10	8	3	1	1	–	33

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಗುಲ್ಬರ್ಗಾ ಜಿಲ್ಲೆ ಹುದ್ದೆಗಳ ಸಂಖ್ಯೆ : 69

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	3	3	3	*1	1	–	–	11
ಪ.ಪಂ.	1	1	–	–	–	–	–	2
ಪ್ರ–1	1	1	1	–	–	–	–	3
ಪ್ರ–2(ಎ)	3	3	3	*1	1	–	–	11
ಪ್ರ–2(ಬಿ)	1	1	1	–	–	–	–	3
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	1	–	–	–	–	3
ಸಾ.ಅ.	7	10	9	*2	3	2	1	34
ಒಟ್ಟು	18	21	18	4	5	2	1	69

* ದೃಷ್ಟಿಮಾಂದ್ಯವುಳ್ಳವರಿಗೆ ಮೀಸಲಿರಿಸಿದೆ.

ಹಾಸನ ಜಿಲ್ಲೆ ಹುದ್ದೆಗಳ ಸಂಖ್ಯೆ : 60

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	3	3	*1	1	–	–	10
ಪ.ಪಂ.	1	1	–	–	–	–	–	2
ಪ್ರ–1	1	1	1	–	–	–	–	3
ಪ್ರ–2(ಎ)	2	3	3	*1	–	–	–	9
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	6	9	8	*2	3	1	1	30
ಒಟ್ಟು	15	20	15	4	4	1	1	60

* ದೃಷ್ಟಿಮಾಂದ್ಯವುಳ್ಳವರಿಗೆ ಮೀಸಲಿರಿಸಿದೆ.

ಹಾವೇರಿ ಜಿಲ್ಲೆ ಹುದ್ದೆಗಳ ಸಂಖ್ಯೆ : 58

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	3	3	*1	–	–	–	9
ಪ.ಪಂ.	1	1	–	–	–	–	–	2
ಪ್ರ–1	1	1	1	–	–	–	–	3
ಪ್ರ–2(ಎ)	2	3	3	*1	–	–	–	9
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	6	9	8	*2	2	1	1	29
ಒಟ್ಟು	15	20	15	4	2	1	1	58

* ದೃಷ್ಟಿಮಾಂದ್ಯವುಳ್ಳವರಿಗೆ ಮೀಸಲಿರಿಸಿದೆ.

ಕೊಡಗು ಜಿಲ್ಲೆ ಹುದ್ದೆಗಳ ಸಂಖ್ಯೆ : 26

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	1	1	1	*1	–	–	–	4
ಪ.ಪಂ.	1	–	–	–	–	–	–	1
ಪ್ರ–1	1	–	–	–	–	–	–	1
ಪ್ರ–2(ಎ)	1	1	1	*1	–	–	–	4
ಪ್ರ–2(ಬಿ)	1	–	–	–	–	–	–	1
ಪ್ರ–3(ಎ)	1	–	–	–	–	–	–	1
ಪ್ರ–3(ಬಿ)	1	–	–	–	–	–	–	1
ಸಾ.ಅ.	3	4	4	*1	1	–	–	13
ಒಟ್ಟು	10	6	6	3	1	–	–	26

* ದೃಷ್ಟಿಮಾಂದ್ಯವುಳ್ಳವರಿಗೆ ಮೀಸಲಿರಿಸಿದೆ.

ಕೋಲಾರ ಜಿಲ್ಲೆ ಹುದ್ದೆಗಳ ಸಂಖ್ಯೆ : 40

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	1	2	2	*1	–	–	–	6
ಪ.ಪಂ.	1	1	–	–	–	–	–	2
ಪ್ರ–1	1	1	–	–	–	–	–	2
ಪ್ರ–2(ಎ)	1	2	2	*1	–	–	–	6
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	–	–	–	–	–	–	1
ಪ್ರ–3(ಬಿ)	1	–	–	–	–	–	–	1
ಸಾ.ಅ.	4	6	5	*1	2	1	1	20
ಒಟ್ಟು	11	13	9	3	2	1	1	40

* ದೃಷ್ಟಿಮಾಂದ್ಯವುಳ್ಳವರಿಗೆ ಮೀಸಲಿರಿಸಿದೆ.

ಕೊಪ್ಪಳ ಜಿಲ್ಲೆ ಹುದ್ದೆಗಳ ಸಂಖ್ಯೆ : 41

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	2	2	*1	–	–	–	7
ಪ.ಪಂ.	1	1	–	–	–	–	–	2
ಪ್ರ–1	1	1	–	–	–	–	–	2
ಪ್ರ–2(ಎ)	1	2	2	*1	–	–	–	6
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	–	–	–	–	–	–	1
ಪ್ರ–3(ಬಿ)	1	–	–	–	–	–	–	1
ಸಾ.ಅ.	4	6	5	*1	2	1	1	20
ಒಟ್ಟು	12	13	9	3	2	1	1	41

* ದೃಷ್ಟಿಮಾಂದ್ಯವುಳ್ಳವರಿಗೆ ಮೀಸಲಿರಿಸಿದೆ.

ಮೈಸೂರು ಜಿಲ್ಲೆ ಹುದ್ದೆಗಳ ಸಂಖ್ಯೆ : 104

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	3	5	5	*1	1	1	–	16
ಪ.ಪಂ.	1	1	1	*1	–	–	–	4
ಪ್ರ–1	1	1	1	*1	–	–	–	4
ಪ್ರ–2(ಎ)	3	5	4	*1	1	1	–	15
ಪ್ರ–2(ಬಿ)	1	1	1	*1	–	–	–	4
ಪ್ರ–3(ಎ)	1	1	1	*1	–	–	–	4
ಪ್ರ–3(ಬಿ)	1	2	1	*1	–	–	–	5
ಸಾ.ಅ.	11	16	13	*2, **1	5	2	2	52
ಒಟ್ಟು	22	32	27	10	7	4	2	104

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮತ್ತು ** ಶ್ರವಣ ದೋಷವುಳ್ಳವರಿಗೆ ಮೀಸಲಿರಿಸಿದೆ.

ಮಂಡ್ಯ ಜಿಲ್ಲೆ ಹುದ್ದೆಗಳ ಸಂಖ್ಯೆ : 88

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	3	4	4	*1	1	–	–	13
ಪ.ಪಂ.	1	1	1	–	–	–	–	3
ಪ್ರ–1	1	1	1	*1	–	–	–	4
ಪ್ರ–2(ಎ)	3	4	4	*1	1	–	–	13
ಪ್ರ–2(ಬಿ)	1	1	1	*1	–	–	–	4
ಪ್ರ–3(ಎ)	1	1	1	–	–	–	–	3
ಪ್ರ–3(ಬಿ)	1	1	1	*1	–	–	–	4
ಸಾ.ಅ.	9	13	11	*2, **1	4	2	2	44
ಒಟ್ಟು	20	26	24	8	6	2	2	88

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮತ್ತು ** ಬಿಂದು ಶ್ರವಣ ದೋಷವುಳ್ಳವರಿಗೆ ಮೀಸಲಿರಿಸಿದೆ.

ರಾಯಚೂರು ಜಿಲ್ಲೆ ಹುದ್ದೆಗಳ ಸಂಖ್ಯೆ : 60

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	3	3	*1	1	–	–	10
ಪ.ಪಂ.	1	1	–	–	–	–	–	2
ಪ್ರ–1	1	1	1	–	–	–	–	3
ಪ್ರ–2(ಎ)	2	3	3	*1	–	–	–	9
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	6	9	8	*2	3	1	1	30
ಒಟ್ಟು	15	20	15	4	4	1	1	60

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಶಿವಮೊಗ್ಗ ಜಿಲ್ಲೆ ಹುದ್ದೆಗಳ ಸಂಖ್ಯೆ : 73

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	3	3	3	*1	1	–	–	11
ಪ.ಪಂ.	1	1	1	–	–	–	–	3
ಪ್ರ–1	1	1	1	–	–	–	–	3
ಪ್ರ–2(ಎ)	3	3	3	*1	1	–	–	11
ಪ್ರ–2(ಬಿ)	1	1	1	–	–	–	–	3
ಪ್ರ–3(ಎ)	1	1	1	–	–	–	–	3
ಪ್ರ–3(ಬಿ)	1	1	1	–	–	–	–	3
ಸಾ.ಅ.	7	11	10	*2	3	2	1	36
ಒಟ್ಟು	18	22	21	4	5	2	1	73

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ತುಮಕೂರು ಜಿಲ್ಲೆ ಹುದ್ದೆಗಳ ಸಂಖ್ಯೆ : 120

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	3	6	5	*1	1	1	1	18
ಪ.ಪಂ.	1	1	1	*1	–	–	–	4
ಪ್ರ–1	1	2	1	*1	–	–	–	5
ಪ್ರ–2(ಎ)	3	5	5	*1	1	1	1	17
ಪ್ರ–2(ಬಿ)	1	2	1	*1	–	–	–	5
ಪ್ರ–3(ಎ)	1	2	1	*1	–	–	–	5
ಪ್ರ–3(ಬಿ)	1	2	2	*1	–	–	–	6
ಸಾ.ಅ.	12	18	15	*2, **1	6	3	3	60
ಒಟ್ಟು	23	38	31	10	8	5	5	120

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮತ್ತು ** ಶ್ರವಣ ದೋಷವುಳ್ಳವರಿಗೆ ಮೀಸಲಿರಿಸಿದೆ.

ಉತ್ತರ ಕನ್ನಡ ಜಿಲ್ಲೆ ಹುದ್ದೆಗಳ ಸಂಖ್ಯೆ : 57

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	3	3	*1	–	–	–	9
ಪ.ಪಂ.	1	1	–	–	–	–	–	2
ಪ್ರ–1	1	1	1	–	–	–	–	3
ಪ್ರ–2(ಎ)	2	3	3	*1	–	–	–	9
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	6	9	7	*2	2	1	1	28
ಒಟ್ಟು	15	20	14	4	2	1	1	57

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಉಡುಪಿ ಜಿಲ್ಲೆ ಹುದ್ದೆಗಳ ಸಂಖ್ಯೆ : 48

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	2	2	*1	–	–	–	7
ಪ.ಪಂ.	1	1	–	–	–	–	–	2
ಪ್ರ–1	1	1	–	–	–	–	–	2
ಪ್ರ–2(ಎ)	2	2	2	*1	–	–	–	7
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	5	7	6	*2	2	1	1	24
ಒಟ್ಟು	14	16	10	4	2	1	1	48

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ರಾಮನಗರ ಜಿಲ್ಲೆ ಹುದ್ದೆಗಳ ಸಂಖ್ಯೆ : 51

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	2	3	2	*1	–	–	–	8
ಪ.ಪಂ.	1	1	–	–	–	–	–	2
ಪ್ರ–1	1	1	–	–	–	–	–	2
ಪ್ರ–2(ಎ)	2	3	2	*1	–	–	–	8
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	1	–	–	–	–	–	2
ಪ್ರ–3(ಬಿ)	1	1	–	–	–	–	–	2
ಸಾ.ಅ.	5	8	6	*2	2	1	1	25
ಒಟ್ಟು	14	19	10	4	2	1	1	51

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ಹುದ್ದೆಗಳ ಸಂಖ್ಯೆ : 36

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	1	2	2	*1	–	–	–	6
ಪ.ಪಂ.	1	–	–	–	–	–	–	1
ಪ್ರ–1	1	1	–	–	–	–	–	2
ಪ್ರ–2(ಎ)	1	2	1	*1	–	–	–	5
ಪ್ರ–2(ಬಿ)	1	1	–	–	–	–	–	2
ಪ್ರ–3(ಎ)	1	–	–	–	–	–	–	1
ಪ್ರ–3(ಬಿ)	1	–	–	–	–	–	–	1
ಸಾ.ಅ	3	6	5	*1	1	1	1	18
ಒಟ್ಟು	10	12	8	3	1	1	1	36

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ಯಾದಗಿರಿ ಜಿಲ್ಲೆ ಹುದ್ದೆಗಳ ಸಂಖ್ಯೆ : 31

ಮೀಸಲಾತಿ	ಇತರೆ	ಮಹಿಳಾ	ಗ್ರಾಮೀಣ	ಅಂಗವಿಕಲ	ಮಾ.ಸೈ.	ಕ.ಮಾ.ಅ.	ಯೋ.ಅ.	ಒಟ್ಟು
ಪ.ಜಾ	1	2	1	*1	–	–	–	5
ಪ.ಪಂ.	1	–	–	–	–	–	–	1
ಪ್ರ–1	1	1	–	–	–	–	–	2
ಪ್ರ–2(ಎ)	1	2	1	*1	–	–	–	5
ಪ್ರ–2(ಬಿ)	1	–	–	–	–	–	–	1
ಪ್ರ–3(ಎ)	1	–	–	–	–	–	–	1
ಪ್ರ–3(ಬಿ)	1	–	–	–	–	–	–	1
ಸಾ.ಅ	3	5	4	*1	1	1	–	15
ಒಟ್ಟು	10	10	6	3	1	1	–	31

* ದೃಷ್ಟಿಮಾಂದ್ಯತೆಯುಳ್ಳವರಿಗೆ ಮೀಸಲಿರಿಸಿದೆ.

ವಿ.ಬಿ. ಪಾಟೀಲ್
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

ಅನುಬಂಧ – 2

ಕಂಪ್ಯೂಟರ್ ಜ್ಞಾನಪರೀಕ್ಷೆಗೆ ಪಠ್ಯಕ್ರಮ

Computer Literacy:

Area	Concept	Specific Item
A. Computer Concepts	Parts of a Computer, Peripherals and their function	Storage, processor, display, mouse, ports, CD Drive, printer and scanner
	Computer Applications	Email, Packaged Applications, Customized Applications
	Security	Passwords, Virus, Backup
	Internet Basics	Accessing the Internet Search Engines
B. MS Excel	Basic Operations and handling text	Opening and saving, entering and editing data, copying and moving data, inserting and deleting rows and columns, merging cells
	Handling Numbers: Simple arithmetic operations and formatting	Addition, subtraction, Multiplication, Division, Average, decimals, currency, percentage
	Handling Dates	Formatting and creating series
	Page Formatting, Setup and Printing	Selecting Print area, setting Margins and adjusting size
C. MS Word	Basic Operations	Opening and saving, copying and moving, finding and replacing
	Text Formatting	Using Formatting Toolbar for Bold, Italics, text orientation, selecting font size, colour, tube and styles
	Page Formatting, Setup and Printing	Bullets and Paragraphs Margins and Page Breaks
	Enhancing documents	Inserting objects, hyperlinks and tables

Area	Concept	Specific Item
D. MS Powerpoint	Basic Operations	Opening, entering and formatting text in different parts of a slide and saving
	Slide Layouts, Master Slide	Creating and applying a Master layout, changing theme and background
	Enhancing slides	Inserting objects, Animation and Creating a Slide Show
	Printing Slides and Handouts	Adjusting number of slides per page, printing with borders
E.	Applications of Computer in Government	MS office, Word (operations in letter typing etc). Excel (report formatting futures etc). Power Point Presentations, Outlook express or email handlings, MS Access or Database basic concepts, emails etc.,
F.		General knowledge of computer industry (like manufacturing companies, available main software, Famous Net Applications, Free email providers etc).

ಅನುಬಂಧ – 3

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗೆ ಪಠ್ಯಕ್ರಮ

(ಎಸ್.ಎಸ್.ಎಲ್.ಸಿ ಪರೀಕ್ಷೆಯ ಕನ್ನಡ ಪ್ರಥಮ ಭಾಷೆಯ ಮಟ್ಟದ ವಿವರಣಾತ್ಮಕ ಪತ್ರಿಕೆ)

ಕ್ರಮ ಸಂಖ್ಯೆ	ಪಠ್ಯ ಕ್ರಮ	ಅಂಕಗಳು
1	ವಿಷಯದ ಸಮಗ್ರ ಅರ್ಥೈಸುವಿಕೆ	25
2	ಪದ ಪ್ರಯೋಗ	25
3	ವಿಷಯ ಸಂಕ್ಷೇಪಣೆ	25
4	ಪದ ಜ್ಞಾನ	25
5	ಲಘು ಪ್ರಬಂಧ	25
6	ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರ	25
ಒಟ್ಟು		**150**

ಅನುಬಂಧ – 4

ನಿರ್ದಿಷ್ಟ ಪತ್ರಿಕೆಯ ಪಠ್ಯಕ್ರಮ

1) **ಗ್ರಾಮ ಪಂಚಾಯಿತಿಗಳ ರಚನೆ:** ಪಂಚಾಯ್ತಿ ಪ್ರದೇಶದ ಘೋಷಣೆ ಮತ್ತು ಗ್ರಾಮ ಪಂಚಾಯ್ತಿಗಳ ಸ್ಥಾಪನೆ, ಗ್ರಾಮ ಪಂಚಾಯ್ತಿ ರಚನೆ, ಸ್ಥಾಯಿ ಸಮಿತಿ ಮತದಾನ ವಿಧಾನ ಮತ್ತು ಚುನಾವಣಾ ಕಾರ್ಯವಿಧಾನ, ಗ್ರಾಮ ಪಂಚಾಯ್ತಿಗಳಿಗೆ ಆಡಳಿತಾಧಿಕಾರಿಯ ನೇಮಕ, ಗ್ರಾಮ ಪಂಚಾಯ್ತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿ ಮತ್ತು ಸೇವಾ ಷರತ್ತುಗಳು, ಗ್ರಾಮ ಪಂಚಾಯ್ತಿ ಸಭೆ, ಕೋರಂ ಮತ್ತು ಕಾರ್ಯವಿಧಾನ, ನಡವಳಿಗಳು, ನಡವಳಿ ಪುಸ್ತಕ, ವಾರ್ಡ್ ಸಭೆ, ಗ್ರಾಮ ಸಭೆ, ಜಮಾಬಂದಿ.

2) **ಗ್ರಾಮ ಪಂಚಾಯ್ತಿಗಳ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳು:** ಗ್ರಾಮ ಪಂಚಾಯ್ತಿಗಳ ಪ್ರಕಾರ್ಯಗಳು, ಗ್ರಾಮ ಪಂಚಾಯ್ತಿಯ ಸಾಮಾನ್ಯ ಅಧಿಕಾರಗಳು, ಸ್ಥಾಯಿ ಸಮಿತಿಗಳು, ಇತರ ಸಮಿತಿಗಳು, ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳು, ಗ್ರಾಮ ಪಂಚಾಯ್ತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಗೌರವ ಧನ ಮತ್ತು ಭತ್ಯೆಗಳು.

3) **ಗ್ರಾಮ ಪಂಚಾಯ್ತಿಗಳ ಸಿಬ್ಬಂದಿ:–** ಕಾರ್ಯದರ್ಶಿ, ಸಿಬ್ಬಂದಿ ಸ್ವರೂಪ ಮತ್ತು ಉದ್ಯೋಗಿಗಳ ಪಟ್ಟಿ, ನೌಕರರ ನೇಮಕಾತಿ ಮತ್ತು ನಿಯಂತ್ರಣ.

4) **ತೆರಿಗೆಗಳು ಮತ್ತು ಫೀಜುಗಳು:–** ಗ್ರಾಮ ಪಂಚಾಯ್ತಿಗಳು ತೆರಿಗೆಗಳ ದರ ವಿಧಿಸುವುದು, ತೆರಿಗೆಗಳು ಮತ್ತು ಇತರ ಬಾಕಿಗಳ ವಸೂಲಿ, ತೆರಿಗೆ ನಿರ್ಧಾರಣೆ ಮುಂತಾದವುಗಳ ವಿರುದ್ಧ ಅಪೀಲು.

5) **ಗ್ರಾಮ ಪಂಚಾಯ್ತಿಗಳ ಅನುದಾನ ಮತ್ತು ನಿಧಿಗಳು:–** ಗ್ರಾಮ ಪಂಚಾಯ್ತಿಗಳಿಗೆ ಅನುದಾನ, ವಿವೇಚನಾತ್ಮಕ ಅನುದಾನ, ಗ್ರಾಮ ಪಂಚಾಯ್ತಿಯ ನಿಧಿ, ಯೋಜನೆಯ ಅನುದಾನಗಳು.

